ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಗ್ರಾಮಸಂಚಾರ ಸೌಲಭ್ಯ ಒದಗಿಸಲು ಸೇತುವೆ ಮತ್ತು ಕಾಸ್‌ವೇ ಎಷ್ಟು ಮಾಡಿದ್ದೀರಿ ಎಂದರೆ ರಸ್ತೆ ಕೆಲಸ ಸೇರಿಸಿ ಹೇಳಿದ್ದಿರಿ. ಈ ವರ್ಷ ಎರಡು ಕ್ಯಾಸಡ್ಯೆನೇಜ್ ಕಾಮಗಾರಿಗಳನ್ನು ಪೂರ್ತಿಸಲಾಗಿದೆ ಎಂದು ಹೇಳಿದ್ದೀರಿ. ಒಂದು ತಾಲ್ಲೂಕಿನಲ್ಲಿ ಒಂದೆರಡು ಸೇತುವೆಗಳನ್ನೂ ಕಟ್ಟಿಸಿದರೆ ಆ ತಾಲ್ಲೂಕನ್ನು ಯಾವರೀತಿ ದೋಕೋಪಯೋಗಿ ಇಲಾ ನೋಡಿಕೊಳ್ಳುತ್ತಿದೆಯೆಂದು ಅರ್ಥವಾಗುತ್ತದೆ ಸ್ವಾಮಿ ?

† ಶ್ರೀ ಎಂ. ಎಸ್. ನಾಗನೂರ್.—ತಿಪಟೂರು ತಾಲ್ಲೂಕಿನಲ್ಲಿ ಎಷ್ಟು ಕಾಮಗಾರಿಗಳನ್ನೂ ಪ್ರಾರಂಭ ಮಾಡಿದ್ದೀರಿ ಎಂದು ಕೇಳಿದ್ದಕ್ಕೆ 127 ಕಾಮಗಾರಿಗಳು ಎಂದು ಕೊಟ್ಟಿದ್ದೇವೆ. ಇದರಲ್ಲಿ 21 ಸಣ್ಣ ಸಣ್ಣ ಸೇತುವೆಗಳು ಮತ್ತು ಕಾಸ್‌ವೇಗಳು. ಉಳಿದ 106 ರಸ್ತೆ ಕಾಮಗಾರಿಗಳು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಿಪಟೂರು ತಾಲ್ಲೂಕಿನ ಅನೇಕ ರಸ್ತೆಗಳಲ್ಲಿ ಮಳೆ ಗಾಲದಲ್ಲಿ ಬರುವುದಕ್ಕಾಗುವುದಿಲ್ಲವೆಂದು ಈ ಸಭೆಯಲ್ಲಿ ಮೂರುನಾಲ್ಕು ವರ್ಷಗಳಿಂದಲೂ ಹೇಳಿದ್ದಕ್ಕೆ ಮಂತ್ರಿಗಳು ಈ ವರ್ಷ ಆ ರಸ್ತೆಗಳ ರಿಪೇರಿ ಕೆಲಸ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಇಲಾಖಾಧಿಕಾರಿಗಳು ಮುಖವಾಗಿರುವುದನ್ನು ಬಿಟ್ಟು ಸಣ್ಣ ಪುಟ್ಟ ಕೆಲಸಗಳನ್ನೂ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಎಸ್. ನಾಗನೂರ್.—Rural Communications ವಿಚಾರವನ್ನೂ ಅಲ್ಲಲ್ಲಿಯ ಸ್ಥಾನಿಕ ಸದಸ್ಯರುಗಳಿಗೆ ಬಿಟ್ಟಿದ್ದೇವೆ. ಅವರು ತೀರ್ಮಾನ ತೆಗೆದುಕೊಂಡು ಕೆಲಸ ಮಾಡ ಬೇಕಾಗುತ್ತದೆ.

SANCTION OF IRRIGATION WELLS IN TIPTUR TALUK.

* *Q.*—279. Sri K. P. REVANASIDDAPPA (Tiptur).—

Will the Government be pleased to state.—

(*a*) the number of applications received for sanctioning irrigation wells in Tiptur Taluk ;

(*b*) the number of wells for which loans have been sanctioned and the reasons for not allotting funds in spite of the increase in the number of applications ;

(*c*) whether they will consider to sink bore-wells, as the wells collapse in very many parts of this taluk ?

A.—Sri M. N. NAGHNOOR (Deputy Minister for Public Works).—

(*a*) 275.

(*b*) 42. The allocations were limited by the total amount of funds available and by the consideration of the needs of scarcity areas in the State for this assistance.

(*c*) No.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—275 ಅರ್ಜಿಗಳು ಬಂದಿರುವಾಗ 42 ಕ್ಕೆ ಮಾತ್ರ ಹಣ ಮಂಜೂರು ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಎಂ. ಎಸ್. ನಾಗನೂರ್.—(ಬ) ಭಾಗಕ್ಕೆ ಕೊಟ್ಟಿರುವ ಉತ್ತರದಲ್ಲಿ ತಿಳಿಸಿದೆ. ಕೇಂದ್ರ ಸರ್ಕಾರದವರು ಕೊಟ್ಟ ಹಣ, ಮತ್ತು ರಾಜ್ಯ ಸರ್ಕಾರಗಳು ಒದಗಿಸಿದ ಹಣ ಇದನ್ನೂ ನೋಡಿ ಕೊಂಡು ಎಷ್ಟು ಕೊಡಲು ಸಾಧ್ಯವೋ ಅಷ್ಟನ್ನು ಮಾತ್ರ ಕೊಟ್ಟಿದ್ದೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಬೇರೆ ತಾಲ್ಲೂಕುಗಳಿಗೆ ಹೆಚ್ಚಿನ ಗ್ರಾಂಟ್ ಕೊಟ್ಟು ತಿಪಟೂರು ತಾಲ್ಲೂಕಿಗೆ ಮಾತ್ರ 42 ಅರ್ಜಿಗಳಿಗೆ ಕೊಡುವುದಕ್ಕೆ ಕಾರಣವೇನು ?

ಶ್ರೀ ಎಂ. ಎನ್. ನಾಗನೂರ್.—ನಾವು ಯಾವ ಭೇದವನ್ನೂ ಮಾಡಿಲ್ಲ. ಅಲ್ಲಲ್ಲಿಯ ಬೇಡಿಕೆಗಳನ್ನೂ ಪೂರೈಸಲಿಕ್ಕೆ ಸರ್ಕಾರ ಪ್ರಯತ್ನ ಮಾಡಿದೆ.

Sri C. J. MUCKANNAPPA.—Has it come to the notice of Government that the money allotted to Tiptur Taluk for irrigation work has been re-distributed among Tumkur Sub-Division and Madugiri Sub-Division just to see that the money is spent before the 31st of this month ?

Sri M. N. NAGHANOOR.—That information is not before me.

Sri C. K. RAJAIAH SHETTY.—Has it come to the notice of Government that just because the Sub-Division Officer of Tiptur has taken leave for one month, the money is not spent ?

Sri M. N. NAGHNOOR.—I have said that we had the limitation of funds. Whatever funds have been placed at the disposal of the Tahsildar or the Assistant Commissioner of that Sub-Division, they have been allotted.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—275 ಅರ್ಜಿಗಳಲ್ಲಿ 42ಕ್ಕೆ ಮಾತ್ರ ಹಣ ಕೊಟ್ಟಿದ್ದೀರಿ. ತಿಪಟೂರು ತಾಲ್ಲೂಕಿಗೆ ಕೊಟ್ಟಿದ್ದ ದುಡ್ಡನ್ನೂ ಬೇರೆ ಸಬ್‌ಡಿವಿಜ್ಞಿಗೆ ಹಂಚಲು ಡೆವಲಪ್‌ಮೆಂಟ್ ಕೌನ್ಸಿಲರ್‌ನಲ್ಲಿ ಡೆಪ್ಯುಟಿ ಕಮಿಷನರ್ ತೀರ್ಮಾನ ಮಾಡಿದ್ದಾರೆಂದು ಗೊತ್ತಾಯಿತು. ಇದರಲ್ಲಿ ಯಾರದೋ ಕೈವಾಡವಿದೆ ಎಂದು ಕಾಣುತ್ತದೆ. ತಿಪಟೂರು ತಾಲ್ಲೂಕಿಗೆ ಕೊಟ್ಟಿದ್ದ ಹಣವನ್ನು ಬೇರೆ ಕಡೆಗೆ ಕೊಡುವುದರ ಉದ್ದೇಶವೇನು ?

ಉಪಾಧ್ಯಕ್ಷರು.—ಪದೇ ಪದೇ ಅದೇ ಪ್ರಶ್ನೆಯನ್ನೂ ಕೇಳುತ್ತಿದ್ದೀರಿ.

2-00 P.M.

Sri G. N. PUTTANNA.—Sir, 275 applications were received and only 45 have been sanctioned. Are Government aware that applications received later are sanctioned and those that were received much earlier are not sanctioned ?

Sri B. D. JATTI.—If the applications have fulfilled all the conditions necessary, then they will be sanctioned; otherwise, not.

Sri G. N. PUTTANNA.—Even though all the conditions are fulfilled by the applicants who have applied earlier, they have not been sanctioned, but applications received later have been sanctioned. I do not find fault with the Government; the officers are doing this. Will the Government enquire ?

Sri B. D. JATTI.—Government will not make an enquiry unless the Hon'ble Member gives us the names of the applicants which are kept back.

Sri G. N. PUTTANNA.—You must call for a report?

Sri B. D. JATTI.—Unless the facts are brought to the notice of the Government, we are not going to call for a report.

Sri G. N. PUTTANNA.—I will give facts and figures. Will you take action ?

Sri B. D. JATTI.—When the Hon'ble Member gives the names and facts and figures, Government will take notice Sir.

CONSTRUCTION OF HOSPITAL BUILDING AT HEBBALE VILLAGE IN ARKALGUD TALUK.

† *Q.*—286. Sri PUTTE GOWDA (Arkalgud).—

Will the Government be pleased to state:—

(*a*) whether it is a fact that a Hospital building has been constructed at Hebbale village, Kasaba Hobli, Arkalgud Taluk, under the N.E.S.;

(*b*) the kind of timber that has been used for the building;

(*c*) whether it was a fact that there was a difference between the accounts of the N.E.S. Office and that of the Taluk Treasury at the time of the payment of the bill for the building ;

(*d*) if so, the amount of the difference ?

A.— Sri H. C. LINGA REDDY (Deputy Minister of Planning and Development).—

(*a*) Yes.

(*b*) Jungle wood.

(*c*) No.

(*d*) Does not arise.

ಶ್ರೀ ಪುಟ್ಟೇಗೌಡ.— ಈ ಆಸ್ಪತ್ರೆಯ ಕಟ್ಟಡಕ್ಕೆ ಯಾವ ಮರ ಹಾಕಲಾಗಿದೆ?

* ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಕಾಡು ಮರ ಹಾಕಬೇಕೆಂದು ಹೇಳಲಾಗಿತ್ತು. ನೇರಳೆ ಮರ ಅಥವಾ ಮತ್ತಿಮರ ಇವುಗಳಲ್ಲಿ ಯಾವುದನ್ನಾದರೂ ಹಾಕಬಹುದಾಗಿದೆ.

ಶ್ರೀ ಬಿ. ಕೆ. ನಾಗೂರ್.—ಕರಾರು ಪತ್ರ ಮಾಡುವಾಗ, ಈ ಕಟ್ಟಡ ಕಟ್ಟುವಾಗ ಇಂತಹ ಮರವನ್ನು ಹಾಕಬೇಕೆಂದು ನಮೂದಿಸಿರಲಿಲ್ಲವೇ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಕಾಡು ಮರಗಳ ಪೈಕಿ ಯಾವುದಾದರೂ ಒಂದು ಬಗೆಯ ಮರವನ್ನು ಹಾಕಬೇಕೆಂದಿತ್ತು.

ಶ್ರೀ ಪುಟ್ಟೇಗೌಡ.—ಈ ಕಟ್ಟಡಕ್ಕೆ ಹೊನ್ನೆಯಾಗಲಿ, ನಂದಿ ಮರವನ್ನಾಗಲಿ ಹಾಕಬೇಕೆಂದು ಎಸ್ಟಿಮೇಟು ಮಾಡಿದ್ದರೇ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಹೊನ್ನೇಮರ ಎಂದೇನೂ ಹೇಳಿಲ್ಲ. ಕಾಡು ಮರ ಎಂದು ಮಾತ್ರ ಹೇಳಲಾಗಿದೆ. ಇದರಲ್ಲಿ ನೇರಳೆ ಅಥವಾ ಮತ್ತಿ ಇಂತಹ ಮರಗಳನ್ನು ಹಾಕಬಹುದು. ಈಗ ಆಲ್ಲ ಯಾವ ಮರ ಉಪಯೋಗಿಸಿದ್ದಾರೆನ್ನುವುದಕ್ಕೆ ನನ್ನಲ್ಲಿ ವಿವರವಿಲ್ಲ.

ಶ್ರೀ ಪುಟ್ಟೇಗೌಡ.—ಈ ವಿಚಾರದಲ್ಲಿ ಅಂಟೀ ಕರಪ್ಷನ್ ಇಲಾಖೆಯವರು ಏನಾದರೂ ವಿಚಾರಣೆ ನಡೆಸಿದ್ದಾರೆಯೇ ?